೨) ಕಾಲೂರು ಗ್ರಾಮದಲ್ಲಿನ ಕಾಲೂರ ಸೇತುವೆ,

೩) ಹೊಸಗೇರಿ ಗ್ರಾಮದಲ್ಲಿನ ಹೊಸಗೇರಿ ಸೇತುವೆ,

ಆ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಮತ್ತು ಆ) ಅರವತೊಕ್ಕಲು ಕೂಡು ರಸ್ತೆ

---

೧) ಈ ಕೆಲಸದ ೭,೦೦,೦೦೦ ರೂ.ಗಳ ಅಂದಾಜು ಪಟ್ಟಿಗೆ ಡಿಸೆಂಬರ್ ೮೬ರಲ್ಲಿ ಆಡಳಿತಾತ್ಮಕ ಮಂಜೂರಾತಿ ಮತ್ತು ಜನವರಿ ೧೯೮೭ರಲ್ಲಿ ತಾಂತ್ರಿಕ ಮಂಜೂರಾತಿ ಕೊಡಲಾಗಿದ್ದು, ಕೆಲಸವನ್ನು ನಿಯಮಗಳಂತೆ ಪ್ರಾರಂಭ ಮಾಡಲಾಗುವುದು.

೨) ಕಾಲೂರು ಗ್ರಾಮದಲ್ಲಿನ ಕಾಲೂರು ಸೇತುವೆ,

ಈ ಕಾಮಗಾರಿಗೆ ಗುತ್ತಿಗೆದಾರರನ್ನು ನಿಯಮಿಸಿದ್ದು ಕಾಮಗಾರಿಯನ್ನು ಪ್ರಾರಂಭಿಸಲು ಸಿದ್ಧತೆಗಳನ್ನು ಮಾಡಲಾಗಿದೆ.

೩) ಹೊಸಗೇರಿ ಗ್ರಾಮದಲ್ಲಿನ ಹೊಸಗೇರಿ ಸೇತುವೆ,

ಈ ಸೇತುವೆ ಕೆಲಸವನ್ನು ಮಾರ್ಚ್ ೧೯೮೭ರಲ್ಲಿ ಪೂರೈಸಲಾಗಿದೆ.

Adult Education Centres

909. SRI VEDANTHA HEMMIGE (Krishna Raja).—Will the Minister for education be pleased to state.—

a) Places where the Adult Education Centres are in the state.

b) How many Vidyapeethas in the State and where they are ?

c) Yearly expenditure incurred for improving the Vidyapeetahas

d) Financial Assistance by State and Central Government every year.

e) Is there a Committee Contituted for the Council.

SRI. D. MANJUNTAHA (Education Minister).—

a) In all the 19 Districts in the State except Bidar District.

b) There are 14 Vidyapeethas in the State (Statement appended).

c) 10,37,50/-

d) By State Government both under Plan and Non-Plan is Rs. 18,23,220.00

By Central Government Rs. 34,06,704.00

Total Rs.1,15,29,924,00

E) Yes. But at present, it is not in existence.

Statement showing the Location of the Vidyapeethas in the State

1 Nanjangud Vidyapeetha for Ladies in Mysore District.
2 Shivaraguda Vidyapeetha, Maddur Tq. in Mandya District.
3 Kengeri Vidyapeetha for Ladies in Bangalore.
4 Basavakalyan Vidyapeetha at Bidar District.
5 Kathavai Vidyapeetha at Chitradurga District.
6 Venigadale Vidyapeetha at Chintamani Tq. Kolar District.
7 Tunga Vidyapeetha at Gaganoor Tq., Shimoga District.
8 Vidyapeetha at Sirsi, Uttara Kannada District.
9 Negalur Vidyapeetha at Hirekerur, Dharwad District.
10 Bunuanala Vidyapeetha at Bijapur District.
11 Yagaji Vidyapeetha at Hassan District
12 Pampa Vidyapeetha at Hospet Tq. Bellary District.
13 Kaveri Vidyapeetha at Malavalli for Ladies, Mandya District.
14 Chara Vidyapeetha at Karkala Tq. Dhakshina Kannada District.

ರೈತರು ಮತ್ತು ಕಾರ್ಮಿಕರುಗಳ ಕ್ಷೇಮಾಭಿವೃದ್ಧಿ ಬಗ್ಗೆ

೮೨೨. ಶ್ರೀ ಬಿ. ಗಂಗಣ್ಣ (ಕಳ್ಳಂಬೆಳ್ಳ).—ಮಾನ್ಯ ಕೃಷಿ ಮತ್ತು ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಮೂರು ವರ್ಷಗಳಲ್ಲಿ ಪ್ರತಿ ಜಿಲ್ಲೆಯಲ್ಲೂ ವರ್ಷ ಪ್ರತಿ ಬಿದ್ದಿರುವ ಮಳೆ ಪ್ರಮಾಣ ವೆಷ್ಟು,

ಆ) ಮಳೆ ಪ್ರಮಾಣಕ್ಕೆ ಅನುಸಾರವಾಗಿ ಪ್ರತಿ ಜಿಲ್ಲೆಯಲ್ಲೂ ರೈತರುಗಳಿಂದ ಉತ್ಪಾದಿಸಿರುವ ಖುಷ್ಕಿ ಮತ್ತು ನೀರಾವರಿ ಬೆಳೆಗಳ ಪ್ರಮಾಣವೆಷ್ಟು,

ಇ) ಮೇಲ್ಕಂಡ ಅಂಕಿ ಅಂಶಗಳ ಆಧಾರದ ಮೇರೆಗೆ ರೈತರ ಮತ್ತು ರೈತ ಕಾರ್ಮಿಕರ ಆರ್ಥಿಕ ಮತ್ತು ಕ್ಷೇಮಾಭಿವೃದ್ಧಿಗಳು ವೃದ್ಧಿಸಲ್ಪಟ್ಟಿರುತ್ತವೆಯೇ ಅಥವಾ ಕ್ಷೀಣಿಸಲ್ಪಟ್ಟಿರುತ್ತವೆಯೆ,

ಈ) ಕೈಗಾರಿಕಾ ಕ್ಷೇತ್ರದಲ್ಲಿ ರೋಗಗ್ರಸ್ಥ ಕೈಗಾರಿಕೋದ್ಯಮಿಗಳಿಗೆ ಸಹಾಯ ನೀಡುವ ರೀತಿಯಲ್ಲೇ ಕೃಷಿಕರಿಗೆ ಮತ್ತು ಕೃಷಿ ಕಾರ್ಮಿಕರಿಗೆ ಸಹಾಯ ಮತ್ತು ಸೌಲಭ್ಯಗಳನ್ನು ನೀಡಲಾಗುತ್ತಿಲ್ಲ.

ಉ) ಇನ್ನು ಮುಂದೆಯಾದರೂ ಕೈಗಾರಿಕಾ ಕ್ಷೇತ್ರ ಮತ್ತು ಕೃಷಿ ಕ್ಷೇತ್ರಗಳನ್ನು ಸಮಾನಾಂತರವಾಗಿ ಪರಿಗಣಿಸಿ ರೈತರು ಪ್ರಕೃತಿ ವಿಕೋಪಕ್ಕೊಳಪಟ್ಟರೆ ಸಮಾನ ಸೌಲಭ್ಯ ಮತ್ತು ಸಹಾಯಗಳನ್ನು ಒದಗಿಸಲಾಗುವುದೇ ?

ಶ್ರೀ ಬಸವರಾಜ್ ಪಟೇಲ್ ಅನ್ವರಿ (ಕೃಷಿ ಮತ್ತು ತೋಟಗಾರಿಕೆ ರಾಜ್ಯ ಸಚಿವರು).—

ಅ) ವಿವರಗಳನ್ನು ತಃಖ್ತೆ ' ಎ ' ನಲ್ಲಿ ಒದಗಿಸಲಾಗಿದೆ.

ಆ) ಜಿಲ್ಲಾವಾರು ಖುಷ್ಕಿ ಮತ್ತು ನೀರಾವರಿ ಬೆಳೆಗಳ ಉತ್ಪಾದನೆಯ ವಿವರಗಳು ಪ್ರತ್ಯೇಕವಾಗಿ ದೊರೆಯುವುದಿಲ್ಲ. ಎರಡನ್ನು ಸೇರಿಸಿದ ವಿವರಗಳನ್ನು ಸದನದ ಮೇಜಿನ ಮೇಲೆ ಇಡಲಾಗಿದೆ. (ತಃಖ್ತೆ ' ಬಿ')